ಸಾಕ್ಷಿಯನ್ನು ದಿಃ 08.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ಅಪಘಾತದ ದಿನ ನಾನು ಚಲಾಯಿಸುತ್ತಿದ್ದ ಬೈಕ್ ನನಗೆ ಸೇರಿದ್ದು. ಆ ಬೈಕ್ ಗೆ ವಿಮೆ ಇತ್ತು. ನನಗೆ ಡಿ.ಎಲ್ ಇದೆ. ಅವುಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಕಂಪಾಲಪುರ ಬಿಟ್ಟು ಅಂದಾಜು 5-6 ಕಿ.ಮೀ ಮುಂದೆ ಬಂದಾಗ ಅಪಘಾತ ಆಗಿದೆ. ಅಪಘಾತ ಸ್ಥಳದಲ್ಲಿ ರಸ್ತೆ ವಿಭಜಕ ಇರಲಿಲ್ಲ. ಅಪಘಾತ ಸ್ಥಳದಲ್ಲಿ ನಾನು ಬಲಕ್ಕೆ ತಿರುಗಬೇಕಾಗಿರಲಿಲ್ಲ. ರಸ್ತೆ ಅಂಚಿನಿಂದ ಎಡಕ್ಕೆ ಒಂದೂವರೆ ಅಡಿ ದೂರದಲ್ಲಿ ಅಪಘಾತ ಆಗಿದೆ. ನಾನು ಹೋಗುತ್ತಿದ್ದ ರಸ್ತೆ ಪಿರಿಯಾಪಟ್ಟಣದ ಕಡೆಗೆ ಹೋಗುತ್ತದೆ. ನನ್ನನ್ನು ನನ್ನ ಮಗ ಆಸ್ಪತ್ರೆಗೆ ಕರೆದುಕೂಂಡು ಹೋಗಿದ್ದಾರೆ. ಅವರ ಹೆಸರು ಗಣೇಶ್. ಅಪಘಾತ ಸ್ಥಳದಿಂದ ನಮ್ಮ ಊರಿಗೆ 9 ರಿಂದ 10 ಕಿ.ಮೀ ದೂರ ಇದೆ. ಆ ಸಮಯದಲ್ಲಿ ನನ್ನ ಮಗ 2-3 ಕಿ.ಮೀ ದೂರದಲ್ಲಿರುವ ತಂಬಾಕು ಬೋರ್ಡ್ ನಲ್ಲಿ ಇದ್ದ. ಅಕ್ಕಪಕ್ಕದ ಜನ ಮಗನಿಗೆ ಕರೆ ಮಾಡಿ ಕರೆಯಿಸಿದ್ದಾರೆ. ಯಾರು ನನ್ನ ಮಗನಿಗೆ ಕರೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಆದ ಎಷ್ಟು ದಿನದ ನಂತರ ಪೋಲೀಸರಿಗೆ ದೂರು ನೀಡಿದ್ದಾರೆ ಎಂದು ಗೊತ್ತಿಲ್ಲ. ಹಿಂದಿನಿಂದ ಅಪಘಾತ ಪಡಿಸಿದ ವಾಹನದ ಚಾಲಕ ಯಾರು ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಮಗ ಎರಡು ದಿನದ ನಂತರ ಪೋಲೀಸರಿಗೆ ಸುಳ್ಳು ದೂರು ನೀಡಿದ್ದಾನೆ ಎಂದರೆ ಸರಿಯಲ್ಲ. ನಾನು ಹೇಳುವುದಕ್ಕೂ ನನ್ನ ಮಗ ದೂರಿನಲ್ಲಿ ಹೇಳಿರುವ ಅಪಘಾತಕ್ಕೂ ವೆತ್ಯಾಸ ಇದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ನಾನೇ ವಾಹನವನ್ನು ಗಮನಿಸದೇ ಅಜಾಗರೂಕತೆಯಿಂದ ಚಲಾಯಿಸಿದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ.

2. ನನಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಹೆಲ್ಮೆಟ್ ಹಾಕಿದ್ದೆ. ಅಪಘಾತದ ನಂತರ ಹೆಲ್ಮೆಟ್ ಏನಾಯಿತು

ಎಂದು ನನಗೆ ಗೊತ್ತಿಲ್ಲ. ನನಗೆ ಮೂರು ಎಕರೆ ಜವೀನು ಇದೆ. ಅದರಲ್ಲಿ ತೆಂಗು, ಶುಂಠಿ ಮತ್ತು ಬಾಳೆ ಬೆಳೆಯುತ್ತೇವೆ. ಈಗ ನನಗೆ ಆಗದೇ ಇರುವ ಕಾರಣ ವ್ಯವಸಾಯ ಮಾಡಿಲ್ಲ. ನನಗೆ ಒಬ್ಬನೇ ಮಗ. ಆತ ವ್ಯವಸಾಯ ಸಹ ಮಾಡುತ್ತಾನೆ. ಮೂರು ಎಕರೆ ಬಿಟ್ಟರೆ ಬೇರೆ ಜಮೀನು ಇಲ್ಲ. ನಾನು ಮತ್ತು ನನ್ನ ಮಗ ಇಬ್ಬರು ಸೇರಿ ವ್ಯವಸಾಯ ಮಾಡುತ್ತಿದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಡಾ. ಆನಂದ್ ಚಿಕಿತ್ಸೆ ನೀಡಿರುತ್ತಾರೆ. ನಾನು ಹಾಜರು ಪಡಿಸಿರುವಷ್ಟು ಔಷಧಿ ಬಿಲ್ಲುಗಳಷ್ಟು ಹಣ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಡಿಸ್ಕೌಂಟ್ ಕೊಟ್ಟಿದ್ದರು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯದ ಬಗ್ಗೆ ದಾಖಲೆ ಇಲ್ಲ. ಅಪಘಾತದಿಂದಾದ ಗಾಯಗಳು ನನಗೆ ವಾಸಿಯಾಗಿದ್ದು ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚು ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.